ತಾರೀಖು 4ನೇ ಜುಲೈ 1876.

ನಗರ ಡಿವಿಜ಼ನ್ ಮುನಸಫರ ಸರ್ಕ್ಯುಟ್ ಕೋರ್ಟುಗಳನ್ನು ಕುರಿತು ಸಕ್ರ 1875ನೇ ಇಸವಿ ಜೂನ್ 26ನೇ ಮುಕ್ತಂ ಮೈಸೂರು ಗೆಜೆಟ್ 2ನೇ ಭಾಗದ 305ನೇ ಪುಟದಲ್ಲಿ ಘೋಷಿಸಿ ಮಾಡಲ್ಪಟ್ಟ ಅದೇ ಸಾಲ್ ಮಾಹೆ 11ನೇ ಮುಕ್ತಂ ಇಸ್ತಿಹಾರ್‌ನ್ನು ಕುರಿತು ಸಕಲ ಜನಗಳ ಮತ್ತು ಇದಕ್ಕೆ ಸಂಬಂಧಪಟ್ಟ ಕೋರ್ಟುಗಳ ತಿಳುವಳಿಕೇ ಬಗ್ಯೂ, ನಡವಳಿಕೆ ಬಗ್ಯೂ, ಯಿದರ ದೆಸೇಯಿಂದ ನೋಟಿಸ್ ಕೊಡಲ್ಪಡುವದೇನಂದರೆ.

1ನೇ—ಕಡೂರು ಡಿಸ್ಟ್ರಿಕ್ಟು ಚಿಕ್ಕಮುಗಳೂರು ಮುನಸಫರಿಂದ ಬಾಳೆ ಹೊನ್ನೂರಲ್ಲಿ ಮೇ ಮತ್ತು ನವೆಂಬರ್ ತಿಂಗಳೊಳಗೆ ಮಾಡಲ್ಪಡುವ ಸರ್ಕ್ಯುಟ್ ಕೋರ್ಟು ಯಿದರ ದೆಸೇಯಿಂದ ಮೌಕೂಫ್ ಮಾಡಲ್ಪಟ್ಟಿರುತ್ತೆ.

2ನೇ—ಕಡೂರು ಮುನಸಫರ ಸರ್ಕ್ಯುಟ್ ಕೋರ್ಟು ಲಕ್ಕವಳ್ಳಿಗೆ ಬದಲಾಗಿ ತರೀಕೆರೆಯಲ್ಲಿ ಮೇ ಮತ್ತು ನವೆಂಬರ್ ತಿಂಗಳೊಳಗೆ ಐಯಿಂದಾ ಮಾಡಲ್ಪಡುವದು.

ತಾರೀಖು 3ನೇ ಜುಲೈ 1876.

ನಂ.

ಬೆಂಗಳೂರು ಸ್ಮಾಲ್‌ಕಾಜ್ ಕೋರ್ಟಿನ ವ್ಯವಹಾರವ ನಡವಳಿತ ಈ ವುಗಳನ್ನು ಕ್ರಮಪಡಿಸಲಿಕ್ಕೋಸ್ಕರ ಅಂಟುವದ ರೂಲ್ಸಿನ 39ನೇ ನಿಬಂಧನೆ ಮೈಸೂರು ಶೀಮೆಯ ಜುಡಿಷಲ್ ಕಮ್ಮಿಷನರವರಿಂದ ತಿದ್ದುಪಡಿ ಮಾಡಲ್ಪಟ್ಟಿರುವ ಸಬಬ್ ಸದರೀ ನಿಬಂಧನೆಯನ್ನು ಈ ಕೆಳಗೆ ಕಾಣಿಸಲ್ಪಡುವೆ ಮೇರೆ ಓದಿಕೊಳ್ಳತಕ್ಕದ್ದು.

39ನೇ ರೂಲ್—ಕಕ್ಷಿಗಾರರಿಗೆ ಪರಸ್ಪರ ಕೋರ್ಟು ಖರ್ಚನ್ನು ನಿರ್ಣಯಿಸುವಲ್ಲಿ ಮೊಕದ್ದಮೆಯು ಕ್ರಮವಾಗಿ ನಿಯಮಿಸಲ್ಪಟ್ಟ ಪ್ಲೀಡರನ್ನು ನೊಕರರ್ ಮಾಡಿಕೊಳ್ಳಲಿಕ್ಕೆ ತಕ್ಕದ್ದೆಂದು ವಿಚಾರಣೇ ಕಾಲದೊಳಗೆ ಜಡ್ಜಿಯು ಸರ್ಟಿಫೈ ಮಾಡಿದ ಹೊರತು ಯಾವ ರುಸುಂ ಬಗ್ಯೂ ಹುಕ್ಕುಂ ಆಗಲಾರದು. ಹಾಗೆ ಹುಕ್ಕುಂ ಮಾಡಲ್ಪಟ್ಟಲ್ಲಿ ಈ ಕೆಳಗೆ ಕಂಡ ಸ್ಕೇಲ್ ಪ್ರಕಾರ ಫೈಸಲ್ ಮಾಡಲ್ಪಡುವದು.

50 ರೂಪಾಯಿಗಳಿಗೆ ಮಿಾರದ ದಾವೆಗಳಲ್ಲಿ ರೂಪಾಯಿ									5	0	0
50	,,	ಮಿಾರಿ	150 ರೂಪಾಯಿಗಳಿಗೆ ಮಿಾರದ ದಾವೆಗಳಲ್ಲಿ ರೂಪಾಯಿ.						7	8	0
150	,,	,,	300	,,	,,	,,	,,		15	0	0
300	,,	,,	500	,,	,,	,,	,,		20	0	0
500	,,	,,	1000	,,	,,	,,	,,		25	0	0

ವಿಶೇಷ ಸಂದರ್ಭಗಳ ದೆಸೆಯಿಂದ ರುಸುಂ ಕಮ್ಮೀ ಮಾಡಬೇಕಾದ ಆವಶ್ಯಕ ತೋರುವೆ ಯಾವ ದಾವೆಯಲ್ಲಾಗಲಿ ಹಾಂಗೆ ರುಸುಂ ಕಮ್ಮೀ ಮಾಡುವದು ಜಡ್ಜಿಯವರ ಯಖ್ತ್ಯಾರೀಯಲ್ಲಿರತಕ್ಕದ್ದು.

J. D. GORDON, *Judl. Commr.*

ಪೊಲೀಸ್ ಇಲಾಖಾ.

ತಾರೀಖು 5ನೇ ಜುಲೈ 1876.

ಬೆಂಗಳೂರು ಡಿಸ್ಟ್ರಿಕ್ಟು ಇನ್‌ಸ್ಪೆಕ್ಟರ್ ಮಹಂತೈಯ್ಯನವರಿಗೆ 1876ನೇ ಯಿಸವಿ ಜೂನ್ 10ರ ಲಗಾಯಿತು 21ರ ವರಿಗೆ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿತು.

"ಬಮೋಜೀಬ್ ಹುಕ್ಕುಂ,"

E. D. GOMPERTZ,
Dy. Inspr. Genl. of Police.

ಪಬ್ಲಿಕ್ ವರ್ಕ್ಸ್ ಇಲಾಖಾ.

ತಾರೀಖು 5ನೇ ಜುಲೈ 1876.

ಹೇಮಾವತಿ ಡಿವಿಜ಼ನ್ ಜಾನೆಲ್ ಡಿಸ್ಟ್ರಿಕ್ಟು ಅಸಿಸ್ಟೆಂಟ್ ಇಂಜಿನಿಯರ್ ಆಫಿಸ್ ಕಾಲ್ಕ್ಯೂ ಲೇಟರ್ ವೆಂಕಟನಾರಣಪ್ಪನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಕ್ ಲಗಾಯಿತು ಪೊಂದುವರೆ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

W. CHRYSTIE, *Major*, R. E.,
Offg. Supg. Engr. for Irrigation.